ಸಾಕ್ಷಿಯನ್ನು ದಿಃ 01-07-2026 ರಂದು ಕರೆಯಿಸಿ ಸತ್ಯ ಪ್ರತಿಜ್ಞೆ ಮಾಡಲಾಯಿತು.

**ಪಾಟೀ ಸವಾಲುಃ ಶ್ರೀ ಎಸ್ ಬಿ ಕೆ ವಕೀಲರಿಂದ (ವಾದಿ ಪರವಾಗಿ)**

ನಾನು ಸಿ ಆರ್ ಪಿ ಎಫ್ ದಲ್ಲಿ ಕಾನ್ಸಟೇಬಲ್ ಆಗಿದ್ದೇನೆ. DW-4 ನನ್ನ ತಮ್ಮ ತಂದೆ ಸರಿ. ಪ್ರತಿವಾದಿ ನಂ.1 ನನ್ನ ಚಿಕ್ಕಪ್ಪ. ವಾದಿ ಸುವರ್ಣಾ ನನ್ನ ಚಿಕ್ಕಪ್ಪನ ಮಗಳು ಹಾಗೂ ವಾದಿ ನಂ.2 ನನ್ನ ಚಿಕ್ಕಮ್ಮ. ದಾವಾ ಆಸ್ತಿ ಸರ್ವೇ ನಂ.733/3+4/ಎ/1 ಸಿ/1 ಪಿತ್ರಾರ್ಜಿತ ಆಸ್ತಿ ಎಂದರೆ ಸರಿ. ಸಾಕ್ಷಿ ಮುಂದುವರೆದು ಪ್ರತಿವಾದಿ ನಂ.1 ಹನಮಪ್ಪ ಐನಪೂರ ಇವರಿಗೆ ಮಾರಾಟ ಮಾಡಿದ್ದು, ಸದರಿ ಹನಮಪ್ಪ ಐನಾಪೂರ ರವರಿಂದ ನಾವು ಖರೀದಿಸಿದ್ದೇವೆ ಎಂದು ಹೇಳುತ್ತಾರೆ. ಹನಮಪ್ಪ ಐನಾಪೂರ ನಮ್ಮ ದೂರದ ಅಣ್ಣ-ತಮ್ಮಂದಿರಾಗಬೇಕು. 1995-1999 ರ ನಡುವೆ ಪ್ರತಿವಾದಿ ನಂ.1 ಹಾಗೂ ವಾದಿಯರ ಸಂಬಂಧ ಚನ್ನಾಗಿರಲಿಲ್ಲ ಎಂದರೆ ಸರಿ. ಆ ನಂತರ ಅವರು ಮತ್ತೆ ಒಂದಾದರು ನಮ್ಮ ತಂದೆ ಹಾಗೂ ಉಳಿದೆಲ್ಲರೂ ಸೇರಿ ಅವರನ್ನು ಕೂಡಿಸಿದರು ಎಂದು ಹೇಳುತ್ತಾರೆ. ಪ್ರತಿವಾದಿ ನಂ.1 ರವರಿಗೆ ಗಂಡು ಸಂತತಿ ಇಲ್ಲದ ಕಾರಣ ಅವರ ಆಸ್ತಿ ಎತ್ತಿ ಹಾಕುವ ಉದ್ದೇಶದಿಂದ ನಾನೇ ಮುಂದೆ ನಿಂತು ಹನಮಪ್ಪ ಐನಾಪೂರ ಹೆಸರಿಗೆ ಖೊಟ್ಟಿ ಖರೀದಿ ಕಾಗದ ಮಾಡಿಸಿದ್ದೇನೆ ಎಂದರೆ ಸರಿಯಲ್ಲ. ನಂತರ ಹನಮಪ್ಪ ಐನಾಪೂರ ಇವರಿಂದ ಖರೀದಿ ಮಾಡಿದವರಂತೆ ತೋರಿಸಿ ನನ್ನ ಹೆಸರಿಗೆ ಮತ್ತೊಂದು ಖೊಟ್ಟಿ ಖರೀದಿ ಪತ್ರ ಮಾಡಿಸಿದ್ದೇನೆ ಎಂದರೆ ಸರಿಯಲ್ಲ.

ಪ್ರತಿವಾದಿ ನಂ.1 ರವರಿಗೆ ಹಣಕಾಸಿನ ತೊಂದರೆ ಇತ್ತು ಎಂದು ತೋರಿಸಲು ದಾಖಲೆ ಹಾಜರಪಡಿಸಿದ್ದೀರಾ ಎಂದರೆ ನಾನು ಊರಲ್ಲಿ ಇರುವುದಿಲ್ಲ ಹಾಗಾಗಿ ಆ ಬಗ್ಗೆ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ನಮ್ಮ ಚಿಕ್ಕಪ್ಪ ಪ್ರತಿವಾದಿ ನಂ.1 ರವರನ್ನು ನಮ್ಮ ತಮ್ಮ ಬಸಪ್ಪ ಜೋಪಾನ ಮಾಡುತ್ತಿದ್ದ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿನ ವಾದಿಯರ ಪಾಲನ್ನು ಎತ್ತಿ ಹಾಕುವ ಉದ್ದೇಶದಿಂದ ಖೊಟ್ಟಿ ಕಾಗದ ತಯಾರಿಸಿ ಸುಳ್ಳು ತಕರಾರು ಸಲ್ಲಿಸಿ, ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ಗದಗ.